**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.30/2025**

**CW -1 PW-1**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ನಾಗಪ್ಪ |
| ತಂದೆ | ಃ | ಕನಕಪ್ಪ |
| ವಯಸ್ಸು | ಃ | 55 |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಗಲಗ |
| ಪ್ರಮಾಣಿಕರಿಸಿದ ದಿನಾಂಕ | ಃ | **26-03-2026** |

---

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ**

ಮೃತ ನೀಲಮ್ಮ ನನ್ನ ಅಣ್ಣನ ಮಗಳು. ಅಪಘಾತ ಹೇಗೆ ಯಾರ ತಪ್ಪಿನಿಂದ ಆಗಿರುತ್ತದೆ ನನಗೆ ಗೊತ್ತಿಲ್ಲ. ಪ್ರಕರಣದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಯಾವುದೇ ದೂರನ್ನು ನೀಡಿಲ್ಲ. ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಅಪಘಾತ ಸ್ಥಳದಲ್ಲಿ ಪೋಲಿಸರು ಪಂಚನಾಮೆ ಮಾಡಿರುವುದಿಲ್ಲ. ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು:- ಮಾನ್ಯ ಸ.ಸ.ಅ ರವರಿಂದ**

ದಿನಾಂಕ 19-08-2024 ರಂದು ಬೆಳಿಗ್ಗೆ 10-05 ಗಂಟೆಗೆ 1 ನೇ ಆರೋಪಿ ತನ್ನ ದ್ವಿಚಕ್ರ ವಾಹನ ನಂ.ಕೆಎ-36 ಇಬಿ-7270 ಮೇಲೆ ಮೃತ ನೀಲಮ್ಮ ಮತ್ತು ಚಾಸಾ-9 ಇವರನ್ನು ಕೂಡಿಸಿಕೊಂಡು ಮಗುವಿಗೆ ಅರಾಮು ಇಲ್ಲದ ಕಾರಣ ಗಲಗ ಆಸ್ಪತ್ರೆಗೆ ತೋರಿಸಿಕೊಂಡು ಬರಲು ಹೋಗುತ್ತಿರುವಾಗ 1 ನೇ ಆರೋಪಿ ದ್ವಿಚಕ್ರ ವಾಹನವನ್ನು ಅತಿವೇಗ ಮತ್ತು ಅಲಕ್ಷತನದಿಂದ ಚಾಲನೆ ಮಾಡಿ ಗಲಗ-ಚಡಕಲಗುಡ್ಡ ಮುಖ್ಯ ರಸ್ತೆಯ ಜನಲೇರ ಶೇಖರಪ್ಪ ಹೊಲದ ಹತ್ತಿರ ವಾಹನ ಸ್ಕಿಡ್ಡಾಗಿ ಹಿಂದೆ ಕುಳಿತ ನೀಲಮ್ಮ ಕೆಳಗೆ ಬಿದ್ದು ತಲೆ ಹಿಂಬದಿಗೆ ಭಾರಿ ಒಳಪೆಟ್ಟು ಆಗಿ ರಕ್ತ ಗಾಯಗಳು ಆಗಿದ್ದು ನೀಲಮ್ಮ ಚಿಕಿತ್ಸ ಫಲಕಾರಿಯಾಗದೇ ದಿನಾಂಕ 21.08.2024 ರಂದು ಬೆಳಿಗ್ಗೆ 03.45 ಗಂಟೆಗೆ ಬಳ್ಳಾರಿ ವಿಮ್ಸ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾಳೆ ಎಂದು ಮತ್ತು

ಸದರಿ ಅಪಘಾತ ಆರೋಪಿತನ ತಪ್ಪಿನಿಂದ ಆಗಿರುತ್ತದೆ ಎಂದು ಪೋಲಿಸರಿಗೆ ನಿಪಿ-1 ರಂತೆ ದೂರು ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 22.08.2024 ರಂದು ಬೆಳಿಗ್ಗೆ 10 ರಿಂದ 11.10 ಗಂಟೆ ವರೆಗೆ ನಾನು ತೋರಿಸಿದ ಅಪಘಾತ ಸ್ಥಳದಲ್ಲಿ ಪೋಲಿಸರು ಪಂಚನಾಮೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲು:-</u> ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.